ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:2410/2015

ಚಾಸಾ:2 ಪ್ರಾಸಾ:2

ದಿನಾಂಕ: 14.07.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಸದಾನಂದ ಹವಲ್ದಾರ್ |
| ತಂದೆಯ ಹೆಸರು | : | ದಾಸಪ್ಪ ಹವಲ್ದಾರ್ |
| ವಯಸ್ಸು | : | 62 ವರ್ಷ |
| ಉದ್ಯೋಗ | : | ವ್ಯವಹಾರ |
| ವಾಸ ಸ್ಥಳ | : | ಕುಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ವಿಶೇಷ ಸ.ಸ.ಅ.ರವರಿಂದ:**

ಆರೋಪಿತರ ಪರಿಚಯವಿದೆ. ಚಾಸಾ-1 ನನ್ನ ಹೆಂಡತಿ. ಚಾಸಾ-3 ನನ್ನ ಮಗ. ವಡೇರಹೋಬಳಿ ಗ್ರಾಮದ ಸರ್ವೆ ನಂಬ್ರ 27/5ಎಪಿ1 ರಲ್ಲಿ 14.50 ಸೆಂಟ್ಸ್ ಜಾಗ ಇರುತ್ತದೆ. ಅದರ ಪೂರ್ವಕ್ಕೆ 1ನೇ ಆರೋಪಿಯ ಜಾಗ, ಪಶ್ಚಿಮಕ್ಕೆ ಸಂತೋಷ ಕುಮಾರವರ ಜಾಗ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಆಚಾರ್ಯರವರ ಗದ್ದೆ ಇರುತ್ತದೆ. ಆರೋಪಿತರು ಪ್ರಾಸಾ-1ರವರಿಗೆ ಹೊಡೆದು ಗಾಯಗೊಳಿಸಿದ್ದು ನಾನು ಹೋಗಿ ನೋಡುವ ವೇಳೆಗೆ ಆಕೆ ಪ್ರಜ್ಞಾಹೀನಳಾಗಿದ್ದಳು. ಅನಂತರ ಆಕೆ ಆರೋಪಿತರು ಕಲ್ಲನ್ನು ಹಾಕಿದ್ದು ಬೆರಳಿಗೆ ಗಾಯವಾಗಿರುವುದಾಗಿ ನನಗೆ ತಿಳಿಸಿರುತ್ತಾರೆ. ಯಾರೆಲ್ಲಾ ಹೊಡೆದಿರುತ್ತಾರೆ ಎಂದು ನಾನು ನೋಡಿಲ್ಲ. ಆಕೆ ನನಗೆ ತಿಳಿಸಿರುತ್ತಾರೆ. ಸಾಕ್ಷಿ ಮುಮಾ1 ನ್ನು ನೋಡಿ ಗುರುತಿಸಿಲ್ಲ. ಮುಮಾ- 2ನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ಭಾಗಶಃ ವಿರುದ್ಧವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ವಿಶೇಷ ಸ.ಸ.ಅ.ರವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಮಾನ್ಯ ಸ.ಸ.ಅ.ರವರಿಂದ:**

ದಿ: 10-02-2015 ರಂದು ಬೆಳಗ್ಗೆ 10-45 ಗಂಟೆಗೆ ನಮ್ಮ ಸ್ವತ್ತಿನ ಪೂರ್ವದ ಬದಿಗೆ ತೆಂಗಿನ ಕಟ್ಟೆಯನ್ನು ಸರಿಪಡಿಸಲು ಮಣ್ಣು ತುಂಬುತ್ತಿದ್ದಾಗ 1ನೇ ಆರೋಪಿ ಅಲ್ಲಿಗೆ ಬಂದು ಅವಾಚ್ಯವಾಗಿ ನಿಂಧಿಸಿ ನಮ್ಮ ಮಾನಕ್ಕೆ ಕುಂದು ಉಂಟು ಮಾಡುವುದಾಗಿ ವರ್ತಿಸಿ, ಪ್ರಾಸಾ-

1ರವರ ನೈಟಿಯನ್ನು ಹಿಡಿದು ಎಳೆದು ಹರಿದು ಹಾಕಿರುತ್ತಾರೆ ಎಂದರೆ ನಾನು ನೋಡಿರುವುದಿಲ್ಲ ಆಗ ನಾನು ಅಂಗಡಿಯಲ್ಲಿ ಇದ್ದೆ. ಆಗ ನಾನು ಮತ್ತು ಚಾಸಾ-3ರವರು ಆರೋಪಿತರನ್ನು ತಡೆದಿರುತ್ತೇವೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಇದ್ದ ಆರೋಪಿತರು ಚಾಸಾ-1ರವರನ್ನು ಹಿಡಿದು ಎಳೆದು, ನೆಲಕ್ಕೆ ಬೀಳಿಸಿ ತುಳಿದಿರುತ್ತಾರೆ ಎಂದರೆ ಸಾಕ್ಷಿ ಆಸ್ಪತ್ರೆಯಲ್ಲಿ ಈ ವಿಚಾರವನ್ನು ಪ್ರಾಸಾ-1ರವರು ತನಗೆ ಹೇಳಿರುವುದಾಗಿ ನುಡಿಯುತ್ತಾರೆ. ಆ ವೇಳೆಗೆ 1ನೇ ಆರೋಪಿ ಕಲ್ಲಿನಿಂದ ಬೀಸಿದಾಗ ಪ್ರಾಸಾ-1ರವರ ಕೈಗೆ ತಾಗಿ ರಕ್ತಗಾಯವಾಗಿರುತ್ತದೆ ಎಂದರೆ ಸಾಕ್ಷಿ ಆಸ್ಪತ್ರೆಯಲ್ಲಿ ನೋಡಿರುವುದಾಗಿ ನುಡಿಯುತ್ತಾರೆ.

ಕಂಪೌಂಡನ್ನು ಕಟ್ಟಲು ಬಿಡುವುದಿಲ್ಲ ನೋಡಿಕೊಳ್ಳುತ್ತೇನೆ ಎಂದು ಬೆದರಿಸಿರುತ್ತಾರೆ ಎಂದರೆ ಈ ವಿಚಾರವನ್ನು ಪ್ರಾಸಾ-1ರವರು ನನಗೆ ಹೇಳಿರುವುದಿಲ್ಲ. ನಾನು ಮತ್ತು ಚಾಸಾ-3ರವರು ಚಾಸಾ-1 ರವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಿಸಿರುತ್ತೇವೆ ಎಂದರೆ ಸರಿ. ಆ ಸಮಯದಲ್ಲಿ ಆರೋಪಿತರೆಲ್ಲರೂ ಸೇರಿ ನಮ್ಮ ವಿರುದ್ದ ದೂರು ನೀಡಿರುತ್ತಾರೆ ಎಂದರೆ ಸರಿ. ಸದ್ರಿ ಕೃತ್ಯವನ್ನು ಆರೋಪಿತರು ಎಸಗಿದ ವೇಳೆಯಲ್ಲಿ ನಾನು ಘಟನಾ ಸ್ಥಳದಲ್ಲಿ ಇದ್ದೆ ಎಂದರೆ ಸರಿಯಲ್ಲ. ಚಾಸಾ-1 ರವರು ಧರಿಸಿದ್ದ ಬಟ್ಟೆಯನ್ನು ಹರಿದು ಆಕೆಯ ಮಾನಕ್ಕೆ ಕುಂದು ಉಂಟು ಮಾಡಿರುತ್ತಾರೆ ಎಂದರೆ ಅದು ನನಗೆ ಆಸ್ಪತ್ರೆಯಲ್ಲಿ ತಿಳಿದು ಬಂದಿರುತ್ತದೆ ಎಂದು ನುಡಿಯುತ್ತಾರೆ.

ಘಟನೆ ನಡೆದು 10 ವರ್ಷಗಳಾದ ಕಾರಣ ನಾನು ಕೆಲವು ವಿಚಾರಗಳನ್ನು ಮರೆತಿರುತ್ತೇನೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ಸಾಕ್ಷಿಯ ಹೇಳಿಕೆ ಭಾಗವನ್ನು ನಿಪಿ-3 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಂ ಡಿ ಎಸ್ ರವರಿಂದಃ</u>**

1ನೇ ಆರೋಪಿ ಮತ್ತು ನನ್ನ ಸ್ಥಳ ಅಕ್ಕಪಕ್ಕದಲ್ಲಿ ಇದೆ ಎಂದರೆ ಸರಿ. ಗಡಿ ವಿಚಾರದಲ್ಲಿ ನಮ್ಮ ನಡುವೆ ತಕರಾರು ಇದೆ ಎಂದರೆ ಸರಿ. ನಮ್ಮ ಜಾಗಕ್ಕೆ ಸಂಬಂಧಿಸಿದಂತೆ ನಮ್ಮ ನಡುವೆ ಸಾಕಷ್ಟು ಪ್ರಕರಣಗಳು ಇವೆ ಎಂದರೆ ಸರಿ. 1ನೇ ಆರೋಪಿಯ ವಿರುದ್ದ ಹಲ್ಲೆ ಮಾಡಿರುವುದಾಗಿ ನಮ್ಮ ಮೇಲೆ ಪ್ರಕರಣ ದಾಖಲಾಗಿದೆ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ. ಪೊಲೀಸರು ಸೂಚಿಸಿದಂತೆ ನೈಟಿಯನ್ನು

ಹಾಜರುಪಡಿಸಿರುತ್ತೇನೆ ಎಂದರೆ ಸರಿ.  ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಾಸಾ-1ರವರು ನನಗೆ ನೀಡಿರುವ ಮಾಹಿತಿ ಮೇರೆಗೆ ನಾನು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿ. ಆಕೆ ಎಷ್ಟರ ಮಟ್ಟಿಗೆ ಸತ್ಯಾಂಶ ನುಡಿದಿರುತ್ತಾರೆ ಎಂದು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರ ವಿರುದ್ದ ನಾವು ಸುಳ್ಳು ಪ್ರಕರಣ ದಾಖಲಿಸಿ ಈಗ ನಮ್ಮ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನಾನು ಆಸ್ಪತ್ರೆಯಲ್ಲಿ ಪ್ರಾಸಾ-1ರವರಿಂದ ಘಟನೆ ಸಂಬಂಧ ಯಾವುದೇ ವಿಚಾರವನ್ನು ತಿಳಿದುಕೊಂಡಿಲ್ಲ ಎಂದರೆ ಸರಿಯಲ್ಲ. ಮುಮಾ1 ಕಲ್ಲನ್ನು ನಾನು ಪೊಲೀಸರಿಗೆ ಹಾಜರುಪಡಿಸಿಲ್ಲ.  ಮುಮಾ1ನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**